Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**

**( ವಿಶೇಷ ಸಂಚಿಕೆ )**

| | |
|---|---|
| **भाग IX** | **अनुभाग 1** |
| **PART IX** | **SECTION 1** |
| **ಭಾಗ IX** | **ವಿಭಾಗ 1** |

**प्राधिकार से प्रकाशित**

**Published by Authority**

**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. १ | नई दिल्ली, गुरुवार, जून ४, २०२० | ज्येष्ठ २२, १९४२ (शका) | खंड ४९ |
| No. 1 | New Delhi, Thursday, June 4, 2020 | Jyeshta 22, 1942 (Saka) | Vol. 49 |
| ನಂ. ೧ | ನವ ದೆಹಲಿ, ಗುರುವಾರ, ಜೂನ್ ೪, ೨೦೨೦ | ಜ್ಯೇಷ್ಠ ೨೨, ೧೯೪೨ (ಶಕ) | ಸಂಪುಟ ೪೯ |


**Ministry of Law and Justice**
Legislative Department
New Delhi, 04th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 04ನೇ ಜೂನ್ 2020**

The Translation in Kannada of the following Acts, namely:- (1) The Public Debt Act, 1944 (18 of 1944) (2) The Dock Workers (Safety, Health and Welfare) Act, 1986 (54 of 1986) (3) The Building and Other Construction Workers' (Regulation of Employment and Conditions of Service) Act, 1996 (27 of 1996) (4) The Building and Other Construction Worker's Welfare Cess Act, 1996 (28 of 1996) (5) The Petroleum and Natural Gas Regulatory Board Act, 2006 (19 of 2006) (6) The Warehousing (Development and Regulation Act), 2007 (37 of 2007) (7) The Carriage by Road Act, 2007 (41 of 2007) (8) The Collection of Statistics Act, 2008 (7 of 2009) (9) The Protection of Children from Sexual Offences Act, 2012 (32 of 2012) (10) The Prohibition of Employment as Manual Scavengers and their Rehabilitation Act, 2013 - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

# ರಸ್ತೆ ಮೂಲಕ ಸಾಗಣೆ ಅಧಿನಿಯಮ, 2007

## (2007ರ ಅಧಿನಿಯಮ ಸಂಖ್ಯೆ 41)

[29ನೇ ಸೆಪ್ಟೆಂಬರ್, 2007] .

ಸಾಮಾನ್ಯ ವಾಹಕರನ್ನು ನಿಯಂತ್ರಿಸುವುದಕ್ಕಾಗಿ ಅವರ ಹೊಣೆಗಾರಿಕೆಯನ್ನು ಸೀಮಿತಗೊಳಿಸುವುದಕ್ಕಾಗಿ ಮತ್ತು ಅವರ ಸೇವಕರುಗಳ ಅಥವಾ ಏಜೆಂಟರುಗಳ ನಿರ್ಲಕ್ಷ್ಯದಿಂದಾಗಿ ಅಥವಾ ಅಪರಾಧಿಕ ಕೃತ್ಯಗಳಿಂದಾಗಿ ಅವರಿಗೆ ವಹಿಸಿದ ಸರಕುಗಳು ನಾಶವಾದುದಕ್ಕೆ ಅಥವಾ ಹಾನಿಗೊಂಡಿದ್ದಕ್ಕೆ ಸಂಬಂಧಿಸಿದಂತೆ ಅವರ ಹೊಣೆಗಾರಿಕೆಯನ್ನು ನಿರ್ಧರಿಸುವ ಸಲುವಾಗಿ ಅಂಥ ಸರಕುಗಳ ಮೌಲ್ಯವನ್ನು ಘೋಷಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

1. **ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ರಸ್ತೆ ಮೂಲಕ ಸಾಗಣೆ ಅಧಿನಿಯಮ, 2007 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಾಮಾನ್ಯ ವಾಹಕ" ಎಂದರೆ ತಾರತಮ್ಯ ಮಾಡದೆ ಎಲ್ಲಾ ವ್ಯಕ್ತಿಗಳಿಗಾಗಿ ಸರಕುಗಳ ರಸೀದಿ ಅನ್ವಯ ಸರಕು ಸಾಗಣೆ ವಾಹನಗಳ ಮೂಲಕ ಸಾಗಿಸುವಂಥ ಸರಕುಗಳನ್ನು ಸಂಗ್ರಹಿಸುವ, ದಾಸ್ತಾನು ಮಾಡುವ, ರವಾನಿಸುವ ಅಥವಾ ವಿತರಿಸುವ ಅಥವಾ ಮೋಟಾರು ಚಾಲಿತ ವಾಹನಗಳಲ್ಲಿ ರಸ್ತೆ ಮೂಲಕ ಸ್ಥಳದಿಂದ ಸ್ಥಳಕ್ಕೆ ಸರಕುಗಳನ್ನು ಬಾಡಿಗೆ ಆಧಾರದ ಮೇಲೆ ಸಾಗಿಸುವ ವ್ಯವಹಾರದಲ್ಲಿ ತೊಡಗಿರುವ ವ್ಯಕ್ತಿ ಮತ್ತು ದಸ್ತಾವೇಜುಗಳನ್ನು, ಸರಕುಗಳನ್ನು ಅಥವಾ ವಸ್ತುಗಳನ್ನು ಸಾಗಿಸುವುದಕ್ಕಾಗಿ ಅಥವಾ ಅವುಗಳೊಂದಿಗೆ ಹೋಗುವುದಕ್ಕಾಗಿ ನೇರವಾಗಿ ಆಗಲಿ ಅಥವಾ ಪರೋಕ್ಷವಾಗಿ ಆಗಲಿ ವ್ಯಕ್ತಿಯ ಸೇವೆಗಳನ್ನು ಬಳಸಿಕೊಂಡು ಅಂತಹ ದಸ್ತಾವೇಜುಗಳನ್ನು, ಸರಕುಗಳನ್ನು ಅಥವಾ ವಸ್ತುಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯದಲ್ಲಿ ನಿರತವಾಗಿರುವ ಸರಕು ಬುಕ್ಕಿಂಗ್ ಕಂಪನಿಯು ಒಳಗೊಳ್ಳುತ್ತದೆ. ಕಂಟ್ರಾಕ್ಟರ್, ಏಜೆಂಟ್, ಬ್ರೋಕರ್ ಒಳಗೊಳ್ಳುತ್ತಾನೆ ಮತ್ತು ಕೊರಿಯರ್ ಏಜೆನ್ಸಿ ಒಳಗೊಳ್ಳುತ್ತದೆ, ಆದರೆ ಸರ್ಕಾರವು ಒಳಗೊಳ್ಳುವುದಿಲ್ಲ.

(ಬಿ) "ಸರಕು ಸ್ವೀಕರ್ತ" ಎಂದರೆ ಸರಕು ರವಾನೆ ಚೀಟಿಯಲ್ಲಿ ಸರಕು ಸ್ವೀಕರ್ತ ಎಂದು ಹೆಸರಿಸಿದ ವ್ಯಕ್ತಿ;

(ಸಿ) "ರವಾನೆ ಸರಕು" ಎಂದರೆ ಸರಕು ರವಾನೆಗಾರನು ಸಾಗಣೆಗಾಗಿ ಸಾಮಾನ್ಯ ವಾಹಕನಿಗೆ ವಹಿಸಿಕೊಟ್ಟ ಯಾವ ದಸ್ತಾವೇಜುಗಳ, ಸರಕುಗಳ ಅಥವಾ ವಸ್ತುಗಳ ವಿವರಣೆಯನ್ನು ಅಥವಾ ವಿವರಗಳನ್ನು ಸರಕು ರವಾನೆ ಚೀಟಿಯಲ್ಲಿ ನೀಡಲಾಗಿದೆಯೋ ಆ ದಸ್ತಾವೇಜುಗಳು, ಸರಕುಗಳು ಅಥವಾ ವಸ್ತುಗಳು;

(ಡಿ) "ಸರಕು ರವಾನೆಗಾರ" ಎಂದರೆ ಸರಕು ರವಾನೆ ಚೀಟಿಯಲ್ಲಿ ಸರಕು ರವಾನೆಗಾರನೆಂದು ಹೆಸರಿಸಿದ ಮತ್ತು ಅಂಥ ಸರಕು ರವಾನೆ ಚೀಟಿಯಲ್ಲಿ ಕಾಣಿಸಿರುವ ದಸ್ತಾವೇಜುಗಳನ್ನು, ಸರಕುಗಳನ್ನು ಅಥವಾ ವಸ್ತುಗಳನ್ನು ಸಾಗಣೆಗಾಗಿ ಯಾರು ಅಥವಾ ಯಾರ ಪರವಾಗಿ ಸಾಮಾನ್ಯ ವಾಹಕನಿಗೆ ವಹಿಸಿಕೊಡಲಾಗಿದೆಯೋ ಆ ವ್ಯಕ್ತಿ;

(ಇ) "ಸರಕುಗಳು" ಪದದಲ್ಲಿ,-

(i) ಸರಕುಗಳನ್ನು ಒಟ್ಟುಗೂಡಿಸಿ ಇಡುವುದಕ್ಕಾಗಿ ಬಳಸುವ ಕಂಟೇನರ್‌ಗಳು, ಪ್ಯಾಲೆಟ್‌ಗಳು ಅಥವಾ ಸರಕುಗಳ ಸಾಗಣೆಗಾಗಿ ಬಳಸುವ ಅದೇ ರೀತಿಯ ವಸ್ತುಗಳು; ಮತ್ತು

(ii) ಪ್ರಾಣಿಗಳು ಮತ್ತು ಜಾನುವಾರುಗಳು

– ಒಳಗೊಳ್ಳುತ್ತದೆ.

(ಎಫ್) "ಸರಕು ರವಾನೆ ಚೀಟಿ" ಎಂದರೆ 8ನೇ ಪ್ರಕರಣದ ಮೇರೆಗೆ ಬರೆದುಕೊಟ್ಟ ದಾಖಲೆ;

(ಜಿ) "ಸರಕು ರಸೀದಿ" ಎಂದರೆ 9ನೇ ಪ್ರಕರಣದ ಮೇರೆಗೆ ನೀಡಿದ ರಸೀದಿ;

(ಎಚ್) "ವ್ಯಕ್ತಿ" ಪದದಲ್ಲಿ, ನಿಗಮಿತವಾಗಿರಲಿ ಅಥವಾ ನಿಗಮಿತವಾಗಿರದಿರಲಿ, ವ್ಯಕ್ತಿಗಳ ಯಾವುದೇ ಸಂಘವು ಅಥವಾ ನಿಕಾಯವು ಅಲ್ಲದೇ, ಸಾಮಾನ್ಯ ವಾಹಕನ ವ್ಯವಹಾರವನ್ನು ನಡೆಸುತ್ತಿರುವ, ರೋಡ್ ಟ್ರಾನ್ಸ್‌ಪೋರ್ಟ್ ಬುಕಿಂಗ್ ಕಂಪನಿಯು ಒಳಗೊಳ್ಳುತ್ತದೆ, ಕಂಟ್ರಾಕ್ಟರ್ ಮತ್ತು ಏಜೆಂಟ್ ಅಥವಾ ಬ್ರೋಕರನು ಒಳಗೊಳ್ಳುತ್ತಾನೆ;

(ಐ) "ನಿಯಮಿಸಿದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜೆ) "ನೋಂದಣಿ ಪ್ರಾಧಿಕಾರ" ಎಂದರೆ ಮೋಟಾರು ವಾಹನಗಳ ಅಧಿನಿಯಮ, 1988 (1988ರ 59)ರ 68ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ರಾಜ್ಯ ಸಾರಿಗೆ ಪ್ರಾಧಿಕಾರ ಅಥವಾ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ;

(ಕೆ) "ನೋಂದಣಿ" ಎಂದರೆ 4ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಮಂಜೂರು ಮಾಡಿದ ಅಥವಾ ನವೀಕರಿಸಿದ ನೋಂದಣಿ;

---

ದಿನಾಂಕ: 20ನೇ ಜುಲೈ 2010 ರಂದು ಜಾರಿಗೆ ಬಂದಿದೆ, ದಿನಾಂಕ: 15ನೇ ಆಗಸ್ಟ್ 2010 ರ ಅಧಿಸೂಚನೆ ಸಂಖ್ಯೆ: ಎಸ್.ಓ. 1738 (ಇ) ನೋಡಿ. ಭಾರತ ರಾಜಪತ್ರದ ವಿಶೇಷ ಸಂಚಿಕೆಯ ಭಾಗ-II ರ ಪ್ರಕರಣ 3 (ii) ನೋಡಿ.

**3. ವ್ಯಕ್ತಿಗಳು ನೋಂದಣಿ ಮಾಡಿಸದೇ ಸಾಮಾನ್ಯ ವಾಹಕನ ವ್ಯವಹಾರದಲ್ಲಿ ತೊಡಗದಿರುವುದು.–** (1) ಯಾರೇ ವ್ಯಕ್ತಿಯು, ಈ ಅಧಿನಿಯಮವು ಪ್ರಾರಂಭವಾದ ತರುವಾಯ, ಅವರಿಗೆ ನೋಂದಣಿಯ ಪ್ರಮಾಣಪತ್ರವು ಮಂಜೂರಾದ ಹೊರತು, ಸಾಮಾನ್ಯ ವಾಹಕನ ವ್ಯವಹಾರದಲ್ಲಿ ತೊಡಗತಕ್ಕದ್ದಲ್ಲ.

(2) ಈ ಅಧಿನಿಯಮವು ಪ್ರಾರಂಭವಾಗುವುದಕ್ಕೂ ಮುಂಚೆ ಯಾರೇ ವ್ಯಕ್ತಿಯು ಪೂರ್ಣವಾಗಿ ಅಥವಾ ಭಾಗಶಃ, ಸಾಮಾನ್ಯ ವಾಹಕನ ವ್ಯವಹಾರದಲ್ಲಿ ತೊಡಗಿದ್ದರೆ, ಆತನು ಕೂಡಲೇ,–

(ಎ) ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ನೋಂದಣಿಗಾಗಿ ಅರ್ಜಿ ಸಲ್ಲಿಸತಕ್ಕದ್ದು;

(ಬಿ) ಯಾರೇ ವ್ಯಕ್ತಿಯು, ನೋಂದಣಿಗಾಗಿ ಅರ್ಜಿ ಸಲ್ಲಿಸಿದ್ದ ಹೊರತು ಮತ್ತು ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣಪತ್ರವನ್ನು ನೀಡಿದ್ದ ಹೊರತು, ಅಂಥ ಪ್ರಾರಂಭದ ದಿನಾಂಕದಿಂದ ಒಂದು ನೂರ ಎಂಬತ್ತು ದಿನಗಳು ಮುಕ್ತಾಯವಾದಾಗ ಆತನು ಅಂಥ ವ್ಯವಹಾರದಲ್ಲಿ ತೊಡಗಿರುವುದು ನಿಂತುಹೋಗತಕ್ಕದ್ದು.

**4. ನೋಂದಣಿಯ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಅರ್ಜಿ.–** (1) ಸಾಮಾನ್ಯ ವಾಹಕನ ವ್ಯವಹಾರದಲ್ಲಿ ತೊಡಗಿರುವ ಅಥವಾ ತೊಡಗಲು ಉದ್ದೇಶಿಸಿರುವ ಯಾರೇ ವ್ಯಕ್ತಿಯು, ಸಾಮಾನ್ಯ ವಾಹಕನ ವ್ಯವಹಾರವನ್ನು ನಡೆಸುವ ಸಲುವಾಗಿ ನೋಂದಣಿ ಪ್ರಮಾಣಪತ್ರದ ನೀಡಿಕೆಗಾಗಿ ಅಥವಾ ಅದರ ನವೀಕರಣಕ್ಕಾಗಿ ನೋಂದಣಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ, ಅರ್ಜಿದಾರನು ಯಾವ ಪ್ರದೇಶದಲ್ಲಿ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ಯಾವ ಮೂಲ ಸ್ಥಳದಲ್ಲಿ ನಡೆಸುತ್ತಿರುವನೋ ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನೋಂದಣಿ ಪ್ರಾಧಿಕಾರಕ್ಕೆ ತನ್ನ ಅರ್ಜಿಯನ್ನು ಮುಖ್ಯ ಕಾರ್ಯಾಲಯಕ್ಕಾಗಿ ಸಲ್ಲಿಸಲಾಗುತ್ತಿದೆ ಎಂದು ನಮೂದಿಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ನೋಂದಣಿ ಪ್ರಾಧಿಕಾರಕ್ಕೆ ನಿಯಮಿಸಬಹುದಾದಂಥ ಯಾವ ಶುಲ್ಕವನ್ನು ಸಂದಾಯ ಮಾಡಬೇಕಾಗಿದೆಯೋ ಆ ಶುಲ್ಕದ ಸಹಿತ ಸಲ್ಲಿಸತಕ್ಕದ್ದು.

(3) ಮುಖ್ಯ ಕಾರ್ಯಾಲಯಕ್ಕಾಗಿ ನೋಂದಣಿ ಪ್ರಮಾಣಪತ್ರದ ಮಂಜೂರಾತಿಗೆ ಅಥವಾ ನವೀಕರಣಕ್ಕೆ ಸಲ್ಲಿಸುವ ಅರ್ಜಿಯಲ್ಲಿ ಮುಖ್ಯ ಕಾರ್ಯಾಲಯವು ಯಾವ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ನೋಂದಾಯಿತವಾಗಬೇಕಾಗಿದೆಯೋ ಆ ರಾಜ್ಯದ ಅಥವಾ ಒಕ್ಕೂಟ ರಾಜ್ಯ ಕ್ಷೇತ್ರದ ಅಧಿಕಾರ ವ್ಯಾಪ್ತಿಯ ಹೊರಗಡೆ ಶಾಖಾ ಕಾರ್ಯಾಲಯವನ್ನು ನಡೆಸಬೇಕಾಗಿದ್ದರೆ ಆ ಶಾಖಾ ಕಾರ್ಯಾಲಯದ ವಿವರಗಳು ಯಾವುದಾದರೂ ಇದ್ದರೆ ಅವು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇರತಕ್ಕದ್ದು:

ಪರಂತು, ಶಾಖಾ ಕಾರ್ಯಾಲಯವನ್ನು ತೆರೆಯುವ ಅಥವಾ ಮುಚ್ಚುವ ಉದ್ದೇಶಕ್ಕಾಗಿ, ಅರ್ಜಿಯನ್ನು, ಮುಖ್ಯ ಕಾರ್ಯಾಲಯದಲ್ಲಿ ಇರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನೋಂದಣಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(4) ನೋಂದಣಿ ಪ್ರಾಧಿಕಾರವು, ನೋಂದಣಿ ಪ್ರಮಾಣಪತ್ರವನ್ನು ಮಂಜೂರು ಮಾಡುವುದಕ್ಕೂ ಮೊದಲು ಅಥವಾ ನವೀಕರಿಸುವುದಕ್ಕೂ ಮೊದಲು ನಿಯಮಿಸಬಹುದಾದಂಥ ಷರತ್ತುಗಳನ್ನು ಅರ್ಜಿದಾರನು ಈಡೇರಿಸಿರುವುದರ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

(5) ನೋಂದಣಿ ಪ್ರಾಧಿಕಾರವು, (2)ನೇ ಉಪ-ಪ್ರಕರಣದ ಅಥವಾ (3)ನೇ ಉಪ-ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ, ಮತ್ತು ಅರ್ಜಿದಾರನು (4)ನೇ ಉಪ-ಪ್ರಕರಣದ ಅಗತ್ಯತೆಗಳನ್ನು ಈಡೇರಿಸಿರುವ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಂಡ ತರುವಾಯ, ಸಾಮಾನ್ಯ ವಾಹಕನ ವ್ಯವಹಾರವನ್ನು ನಡೆಸುವುದಕ್ಕಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಸಂದರ್ಭಾನುಸಾರ ನೋಂದಣಿ ಪ್ರಮಾಣಪತ್ರವನ್ನು ಮಂಜೂರು ಮಾಡಬಹುದು ಅಥವಾ ಅದನ್ನು ನವೀಕರಿಸಬಹುದು:

ಪರಂತು, ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣ ಪತ್ರದ ಮಂಜೂರಾತಿಗಾಗಿ ಅಥವಾ ನವೀಕರಿಸುವುದಕ್ಕಾಗಿ ಬಂದ ಅರ್ಜಿಯನ್ನು, ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ನೋಂದಣಿ ಪ್ರಾಧಿಕಾರವು ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ಹೊರತು ಮತ್ತು ಅರ್ಜಿಯನ್ನು ತಿರಸ್ಕರಿಸಿರುವುದಕ್ಕೆ ಕಾರಣಗಳನ್ನು, ಲಿಖಿತದಲ್ಲಿ ನೀಡಿದ ಹೊರತು ತಿರಸ್ಕರಿಸತಕ್ಕದ್ದಲ್ಲ:

ಮತ್ತು ಪರಂತು, ನೋಂದಣಿ ಪ್ರಾಧಿಕಾರವು ಅಂಥ ಅರ್ಜಿಯನ್ನು ತಿರಸ್ಕರಿಸಿರುವುದನ್ನು ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ ತಿಳಿಸದಿದ್ದರೆ, ಆ ತರುವಾಯ ನೋಂದಣಿ ಪ್ರಾಧಿಕಾರವು, ಮುಂದಿನ ಮೂವತ್ತು ದಿನಗಳ ಅವಧಿಯೊಳಗೆ ನೋಂದಣಿ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದು ಅಥವಾ ನವೀಕರಿಸತಕ್ಕದ್ದು.

(6) ಉಪ-ಪ್ರಕರಣ (5)ರ ಮೇರೆಗೆ ಮಂಜೂರು ಮಾಡಿದ ಅಥವಾ ನವೀಕರಿಸಿದ ನೋಂದಣಿ ಪ್ರಮಾಣಪತ್ರವು, ವಿವಿಧ ರಾಜ್ಯಗಳಲ್ಲಿ ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಬೇಕಾಗಿರುವ ಶಾಖಾ ಕಾರ್ಯಾಲಯಗಳ ವಿವರಗಳನ್ನು ಒಳಗೊಂಡಿರತಕ್ಕದ್ದು ಮತ್ತು ಸಂದರ್ಭಾನುಸಾರ ಅಂಥ ಮಂಜೂರಾತಿಯು ಅಥವಾ ನವೀಕರಣವು ಮಂಜೂರಾದ ಅಥವಾ ನವೀಕರಣಗೊಂಡ ದಿನಾಂಕದಿಂದ ಹತ್ತು ವರ್ಷಗಳ ಅವಧಿಯವರೆಗೆ ಸಿಂಧುವಾದುದಾಗಿರತಕ್ಕದ್ದು:

ಪರಂತು, ನೋಂದಣಿಯು (3)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ಶಾಖಾ ಕಾರ್ಯಾಲಯಗಳಿಗೆ ಸಂಬಂಧಿಸಿದ್ದರೆ, ಅಂಥ ನೋಂದಣಿಯ ಮಾನ್ಯತೆ ಅವಧಿಯು ಮುಖ್ಯ ಕಾರ್ಯಾಲಯಕ್ಕೆ ಸಂಬಂಧಪಟ್ಟಂತೆ ಮಂಜೂರು ಮಾಡಿದ ನೋಂದಣಿಯ ಮಾನ್ಯತೆ ಅವಧಿಯಷ್ಟಕ್ಕೆ ಸೀಮಿತವಾದುದಾಗಿರತಕ್ಕದ್ದು.

(7) ನೋಂದಣಿಯ ಪ್ರಮಾಣಪತ್ರವನ್ನು ಹೊಂದಿರುವವನು,–

(ಎ) ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ರೀತಿಯಲ್ಲಿ ರಿಜಿಸ್ಟರನ್ನು ನಿರ್ವಹಿಸತಕ್ಕದ್ದು;

(ಬಿ) ನೋಂದಣಿಯ ವರ್ಗಾವಣೆಗಾಗಿ ನೋಂದಣಿ ಪ್ರಮಾಣಪತ್ರದಲ್ಲಿ ಕಾಣಿಸಿದ ಮುಖ್ಯ ಕಾರ್ಯಾಲಯವನ್ನು ಸ್ಥಳಾಂತರಿಸುವುದಕ್ಕಾಗಿ ಯಾವ ನೋಂದಣಿ ಪ್ರಾಧಿಕಾರವು ನೋಂದಣಿಯ ಪ್ರಮಾಣಪತ್ರವನ್ನು ನೀಡಿತ್ತೋ ಆ ನೋಂದಣಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು:

ಪರಂತು, ಅಂಥ ನೋಂದಣಿ ಪ್ರಾಧಿಕಾರವು, ಅಂಥ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಮುಖ್ಯ ಕಾರ್ಯಾಲಯವನ್ನು ಸ್ಥಳಾಂತರಿಸುವುದಕ್ಕಾಗಿ ಅನುಮತಿಯನ್ನು ನೀಡತಕ್ಕದ್ದು ಅಥವಾ ತಿರಸ್ಕರಿಸತಕ್ಕದ್ದು ಮತ್ತು ಮುಖ್ಯ ಕಾರ್ಯಾಲಯವನ್ನು ಸ್ಥಳಾಂತರಿಸುವುದಕ್ಕಾಗಿ ಯಾವುದೇ ಅರ್ಜಿಯನ್ನು, ಅರ್ಜಿದಾರನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಕೊಟ್ಟ ಹೊರತು ಮತ್ತು ನೋಂದಣಿ ಪ್ರಾಧಿಕಾರವು ಹಾಗೆ ತಿರಸ್ಕರಿಸಿರುವುದಕ್ಕೆ ಲಿಖಿತದಲ್ಲಿ ಕಾರಣಗಳನ್ನು ನೀಡಿದ ಹೊರತು ತಿರಸ್ಕರಿಸತಕ್ಕದ್ದಲ್ಲ:

ಮತ್ತು ಪರಂತು, ನೋಂದಣಿ ಪ್ರಾಧಿಕಾರವು, ಮೂವತ್ತು ದಿನಗಳೊಳಗೆ ಮಂಜೂರಾತಿಯನ್ನು ನೀಡಿರದಿರುವ ಅಥವಾ ತಿರಸ್ಕರಿಸದಿರುವ ಸಂದರ್ಭದಲ್ಲಿ ಸ್ಥಳಾಂತರಿಸುವುದಕ್ಕಾಗಿ ಅನುಮತಿ ನೀಡಲಾಗಿದೆ ಎಂದು ಭಾವಿಸತಕ್ಕದ್ದು.

(ಸಿ) ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಮುಖ್ಯ ಕಾರ್ಯಾಲಯವು ಇರುತ್ತದೆಯೋ ಆ ನೋಂದಣಿ ಪ್ರಾಧಿಕಾರಕ್ಕೆ ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಂಬಂಧದಲ್ಲಿ ವ್ಯವಹರಿಸುತ್ತಿರುವ ಮತ್ತು ಕೇಂದ್ರ ಸರ್ಕಾರದ ಮಂತ್ರಾಲಯದ ಅಥವಾ ಇಲಾಖೆಯ ಸಾರಿಗೆ ಸಂಶೋಧನಾ ವಿಭಾಗಕ್ಕೆ ನಿಯಮಿಸಬಹುದಾದಂಥ ಮಾಹಿತಿಯನ್ನು ಮತ್ತು ವಿವರಪಟ್ಟಿಕೆಯನ್ನು ಪ್ರತಿ ವರ್ಷ ಮಾರ್ಚ್ ಮೂವತ್ತೊಂದನೇ ದಿನಾಂಕದ ತರುವಾಯದ ಒಂದು ನೂರಾ ಇಪ್ಪತ್ತು ದಿನಗಳೊಳಗೆ ಸಲ್ಲಿಸತಕ್ಕದ್ದು;

(ಡಿ) ನೋಂದಣಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಅಥವಾ ಸಂಬಂಧಪಟ್ಟ ನೋಂದಣಿ ಪ್ರಾಧಿಕಾರವು, ನೋಟರಿಯು ಅಥವಾ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಗೆಜೆಟೆಡ್ ಅಧಿಕಾರಿಯು ದೃಢೀಕರಿಸಿದ ಅದರ ಪ್ರಮಾಣಿತ ಪ್ರತಿ ಯಾವುದಾದರೂ ಇದ್ದರೆ ಅದನ್ನು ನೋಂದಣಿ ಪ್ರಾಧಿಕಾರದ ಮುಖ್ಯ ಕಾರ್ಯಾಲಯದಲ್ಲಿ ಮತ್ತು ಪ್ರತಿಯೊಂದು ಶಾಖಾ ಕಾರ್ಯಾಲಯದಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

(8) ಸಾಮಾನ್ಯ ವಾಹಕನು, ಸರಕು ರವಾನೆ ಚೀಟಿಯಲ್ಲಿ ಅಥವಾ ಸರಕುಗಳ ರಸೀದಿಯಲ್ಲಿ ಯಾವ ನೋಂದಣಿ ಪ್ರಮಾಣ ಪತ್ರದಲ್ಲಿ ತನ್ನ ನೋಂದಣಿ ಸಂಖ್ಯೆಯನ್ನು ನಮೂದಿಸಲಾಗಿದೆಯೋ ಆ ನೋಂದಣಿ ಪ್ರಮಾಣಪತ್ರದಲ್ಲಿ ನಮೂದಿಸಿರುವಂತೆ ಮೋಟಾರು ವಾಹನಕ್ಕೆ ತುಂಬುವ ಒಟ್ಟು ತೂಕಕ್ಕಿಂತ ಹೆಚ್ಚಿನ ತೂಕವನ್ನು ಮೋಟಾರು ವಾಹನಕ್ಕೆ ತುಂಬತಕ್ಕದ್ದಲ್ಲ ಮತ್ತು ಸಾಮಾನ್ಯ ವಾಹಕನು ವಾಹನಕ್ಕೆ ತುಂಬುವ ಒಟ್ಟು ತೂಕಕ್ಕಿಂತ ಮೀರಿದ ತೂಕವನ್ನು ತುಂಬಲು ಅನುಮತಿಸತಕ್ಕದ್ದಲ್ಲ.

**5. ನೋಂದಣಿಯ ಅಮಾನತ್ತು ಅಥವಾ ರದ್ದಿಯಾತಿ.-** (1) ನೋಂದಣಿಯ ಪ್ರಮಾಣಪತ್ರದ ಧಾರಕನು 4ನೇ ಪ್ರಕರಣದ (7)ನೇ ಉಪ-ಪ್ರಕರಣದ ಯಾವುದೇ ಉಪಬಂಧಗಳನ್ನು ಪಾಲಿಸಲು ತಪ್ಪಿದ್ದಾನೆಂದು ನೋಂದಣಿ ಪ್ರಾಧಿಕಾರಕ್ಕೆ ಮನದಟ್ಟಾದರೆ, ಅದು ಮೂವತ್ತು ದಿನಗಳ ಅವಧಿಯೊಳಗೆ ಉಪಬಂಧಗಳನ್ನು ಪಾಲಿಸುವಂತೆ ನೋಂದಣಿ ಪ್ರಮಾಣ ಪತ್ರದ ಧಾರಕನಿಗೆ ನೋಂದಾಯಿತ ಅಂಚೆ ಮೂಲಕ ಅಥವಾ ವಿದ್ಯುನ್ಮಾನ ಮಾಧ್ಯಮದ ಮುಖಾಂತರ ಅಥವಾ ಯಾವುದೇ ರುಜುವಾತನ್ನು ಒದಗಿಸಬಹುದಾದ ಸಾಧನದ ಮೂಲಕ, ನೋಟೀಸನ್ನು ನೀಡಬಹುದು ಮತ್ತು ಅಂಥ ಧಾರಕನು ಪಾಲಿಸಲು ತಪ್ಪಿದ ಸಂದರ್ಭದಲ್ಲಿ, ನೋಂದಣಿ ಪ್ರಾಧಿಕಾರವು, ಆ ಬಗ್ಗೆ ವಿಚಾರಣೆಯನ್ನು ಪೂರ್ಣಗೊಳಿಸಿದ ತರುವಾಯ ಅಂಥ ನೋಂದಣಿಯ ಪ್ರಮಾಣಪತ್ರವನ್ನು ರದ್ದುಗೊಳಿಸಬಹುದು.

(2) ನೋಂದಣಿ ಪ್ರಾಧಿಕಾರವು ಸಾಮಾನ್ಯ ವಾಹಕನ ವಿರುದ್ಧ ಸರಕು ರವಾನೆಗಾರನಿಂದ,-

(i) ಸರಕುಗಳ ರಸೀದಿಯನ್ನು ನೀಡದಿರುವ ಬಗ್ಗೆ; ಅಥವಾ

(ii) ಸರಕು ರವಾನೆಗಾರನು ಅಥವಾ ಸರಕು ಸ್ವೀಕರ್ತನು ಕೇಳಿದಾಗ ಸಾಗಣೆಯಲ್ಲಿರುವ ಸರಕುಗಳು ಎಲ್ಲಿವೆ ಎಂಬುದನ್ನು ತಿಳಿಸದಿರುವುದರ ಬಗ್ಗೆ; ಅಥವಾ

(iii) ತಲುಪಿಸಬೇಕಾದ ಸರಕುಗಳನ್ನು ಸಿಂಧುವಾದ ಕಾರಣಗಳಿಲ್ಲದೆ ತಡೆಹಿಡಿದಿರುವ ಬಗ್ಗೆ; ಅಥವಾ

(iv) ಸರಕಗಳನ್ನು ಸ್ವಾಧೀನಕ್ಕೆ ಒಪ್ಪಿಸುವ ಕಾಲದಲ್ಲಿ ಯಾವ ಅಸಮಂಜಸ ಹೆಚ್ಚುವರಿ ಶುಲ್ಕಗಳ ಬಗ್ಗೆ ಸರಕು ರವಾನೆಗಾರನ ಮತ್ತು ಸರಕು ಸ್ವೀಕರ್ತನ ನಡುವೆ ಈ ಮುಂಚೆ ಗೊತ್ತಿಲ್ಲದಿರುವ ಅಥವಾ ಒಪ್ಪಿಕೊಂಡಿಲ್ಲದಿರುವ ಅಸಮಂಜಸ ಹೆಚ್ಚುವರಿ ಶುಲ್ಕಗಳನ್ನು ತಗಾದೆ ಮಾಡದಿರುವ ಬಗ್ಗೆ; ಅಥವಾ

(v) ಟ್ರಕ್ ಮಾಲೀಕರಿಗೆ ಸಂದಾಯ ಮಾಡಲು ಒಪ್ಪಿಕೊಂಡ ಹಾಗೂ ಸಂದಾಯ ಮಾಡಬೇಕಾದ ಶುಲ್ಕಗಳನ್ನು ಸಂದಾಯ ಮಾಡದಿರುವ ಬಗ್ಗೆ

– ದೂರನ್ನು ಸ್ವೀಕರಿಸಿದರೆ ಅದು, ಮೂವತ್ತು ದಿನಗಳ ಅವಧಿಯೊಳಗೆ ನೋಂದಣಿ ಪ್ರಮಾಣ ಪತ್ರವನ್ನು ಸರಿಪಡಿಸಿಕೊಳ್ಳಲು ಉಪಬಂಧಗಳನ್ನು ಪಾಲಿಸುವಂತೆ ನೋಂದಣಿ ಪ್ರಮಾಣಪತ್ರದ ಧಾರಕನಿಗೆ ನೋಂದಾಯಿತ ಅಂಚೆ ಮೂಲಕ ಅಥವಾ ವಿದ್ಯುನ್ಮಾನ ಮಾಧ್ಯಮದ ಮುಖಾಂತರ ಅಥವಾ ಯಾವುದೇ ರುಜುವಾತನ್ನು ಒದಗಿಸಬಹುದಾದ ಸಾಧನದ ಮೂಲಕ ನೋಟೀಸನ್ನು ನೀಡಬಹುದು ಮತ್ತು ಅಂಥ ಧಾರಕನು ಹಾಗೆ ಪಾಲಿಸಲು ತಪ್ಪಿದ ಸಂದರ್ಭದಲ್ಲಿ, ನೋಂದಣಿ ಪ್ರಾಧಿಕಾರವು ಆ ಬಗ್ಗೆ ವಿಚಾರಣೆಯನ್ನು ಪೂರ್ಣಗೊಳಿಸಿದ ತರುವಾಯ ಅಂಥ ನೋಂದಣಿ ಪ್ರಮಾಣಪತ್ರವನ್ನು ರದ್ದುಗೊಳಿಸಬಹುದು.

(3) ಮೋಟಾರು ವಾಹನಗಳ ಅಧಿನಿಯಮ, 1988 (1988ರ 59)ರ ಮೇರೆಗಿನ ನೋಂದಣಿ ಪ್ರಾಧಿಕಾರವು ಅಥವಾ ಹಾಗೆ ಅಧಿಕೃತಗೊಂಡ ಯಾವುದೇ ಇತರ ಪ್ರಾಧಿಕಾರವು, 4ನೇ ಪ್ರಕರಣದ (8)ನೇ ಉಪ-ಪ್ರಕರಣದ ಉಪಬಂಧಗಳು ಉಲ್ಲಂಘನೆ ಆಗಿರುವುದರ ಬಗ್ಗೆ ರುಜುವಾತನ್ನು ಸ್ವೀಕರಿಸಿದರೆ, ಅದು ಸಾಮಾನ್ಯ ವಾಹಕನ ಮೇಲೆ ಮೋಟಾರು ವಾಹನಗಳ ಅಧಿನಿಯಮ, 1988ರ 194ನೇ ಪ್ರಕರಣದ ಮೇರೆಗೆ ನಿಯಮಿಸಿದ ದಂಡವನ್ನು, ಸಂದರ್ಭಾನುಸಾರ, ಸರಕು ವಾಹನದ ಚಾಲಕನ ಮೇಲೆ ಅಥವಾ ಸರಕು ವಾಹನ ಮಾಲೀಕನ ಮೇಲೆ ಅಥವಾ ಸರಕು

ರವಾನೆಗಾರರ ಮೇಲೆ ಅಂಥ ದಂಡವನ್ನು ಈಗಾಗಲೇ ವಿಧಿಸಿದ್ದರೂ ಮತ್ತು ಅವರಿಂದ ಅದನ್ನು ವಸೂಲಿ ಮಾಡಿದ್ದರೂ ಅದನ್ನು ವಿಧಿಸಲು ಸಕ್ಷಮವಾಗಿರತಕ್ಕದ್ದು.

(4) ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸುವುದಕ್ಕಾಗಿ, ನೋಂದಣಿ ಪ್ರಮಾಣಪತ್ರದ ಧಾರಕನಿಗೆ ವಿಚಾರಣಾ ಸಮಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಮತ್ತು ಅಂಥ ಕ್ರಮವನ್ನು ತೆಗೆದುಕೊಳ್ಳುತ್ತಿರುವುಕ್ಕೆ ಕಾರಣಗಳನ್ನು ಲಿಖಿತದಲ್ಲಿ ನೀಡದ ಹೊರತು (1)ನೇ ಹಾಗೂ (2)ನೇ ಉಪ-ಪ್ರಕರಣಗಳ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

(5) ಸಾಮಾನ್ಯ ವಾಹಕನ ಮುಖ್ಯ ಕಾರ್ಯಾಲಯವು ಯಾವ ನೋಂದಣಿ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಬರುವುದೋ ಆ ನೋಂದಣಿ ಪ್ರಾಧಿಕಾರವು (1)ನೇ ಮತ್ತು (2)ನೇ ಉಪ-ಪ್ರಕರಣಗಳ ಮೇರೆಗೆ ಕ್ರಮ ತೆಗೆದುಕೊಳ್ಳಲು ಸಕ್ಷಮವಾಗಿರತಕ್ಕದ್ದು ಮತ್ತು ಸದರಿ ಉಪ-ಪ್ರಕರಣಗಳ ಮೇರೆಗೆ ಉಲ್ಲಂಘನೆಗಳಾಗಿರುವುದನ್ನು ಯಾವುದೇ ಇತರ ನೋಂದಣಿ ಪ್ರಾಧಿಕಾರವು ಗಮನಿಸಿದ್ದರೆ ಅಥವಾ ದೂರುಗಳನ್ನು ಸ್ವೀಕರಿಸಿದ್ದರೆ ಆ ಯಾವುದೇ ಇತರ ನೋಂದಣಿ ಪ್ರಾಧಿಕಾರವು, ಮುಖ್ಯ ಕಾರ್ಯಾಲಯದ ಮೇಲೆ ಯಾವ ನೋಂದಣಿ ಪ್ರಾಧಿಕಾರವು ಅಧಿಕಾರವ್ಯಾಪ್ತಿಯನ್ನು ಹೊಂದಿದೆಯೋ ಆ ನೋಂದಣಿ ಪ್ರಾಧಿಕಾರಕ್ಕೆ ಅಂತಹ ವಿಷಯವನ್ನು ವರದಿ ಮಾಡತಕ್ಕದ್ದು.

(6) ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸಿದಾಗ, ನೋಂದಣಿ ಪ್ರಮಾಣಪತ್ರದ ಧಾರಕನು, ಮೂವತ್ತು ದಿನಗಳ ಅವಧಿಯೊಳಗೆ ನೋಂದಣಿ ಪ್ರಾಧಿಕಾರಕ್ಕೆ ನೋಂದಣಿ ಪ್ರಮಾಣಪತ್ರವನ್ನು ಹಿಂತಿರುಗಿಸತಕ್ಕದ್ದು ಮತ್ತು ಆತನ ನೋಂದಣಿ ವಾಹಕನು ರದ್ದುಪಡಿಸುವುದಕ್ಕೆ ಮುಂಚೆ ಯಾರೇ ಸರಕು ರವಾನೆಗಾರನಿಂದ ಸಾಮಾನ್ಯ ವಾಹಕನು ಈಗಾಗಲೇ ಸ್ವೀಕರಿಸಿದ್ದ ಸರಕುಗಳ ಸಂಬಂಧದಲ್ಲಿ ಆ ಸರಕುಗಳನ್ನು ವಶಕ್ಕೆ ಒಪ್ಪಿಸುವುದು ಮತ್ತು ವ್ಯವಹಾರಗಳನ್ನು ಪೂರ್ಣಗೊಳಿಸುವುದು ನೋಂದಣಿ ಪ್ರಮಾಣಪತ್ರದ ಧಾರಕನ ಕರ್ತವ್ಯವಾಗಿರತಕ್ಕದ್ದು.

(7) ನೋಂದಣಿ ಪ್ರಮಾಣಪತ್ರದ ಧಾರಕನು, ಯಾವ ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣ ಪತ್ರವನ್ನು ಮಂಜೂರು ಮಾಡಿತ್ತೊ ಆ ನೋಂದಣಿ ಪ್ರಾಧಿಕಾರಕ್ಕೆ ಯಾವುದೇ ಸಮಯದಲ್ಲಿ ಪ್ರಮಾಣಪತ್ರವನ್ನು ಹಿಂದಿರುಗಿಸಬಹುದು ಮತ್ತು ಹಾಗೆ ಹಿಂದಿರುಗಿಸದ ಮೇಲೆ ನೋಂದಣಿ ಪ್ರಾಧಿಕಾರವು ನೋಂದಣಿ ಪ್ರಮಾಣಪತ್ರದ ಧಾರಕನಿಂದ, ಯಾವುದೇ ಹೊಣೆಗಾರಿಕೆಯು ತನ್ನಿಂದ ಬಾಕಿ ಇಲ್ಲವೆಂಬ ಮತ್ತು ಹೊಣೆಗಾರನಾದರೆ, ಅಂಥ ಹೊಣೆಗಾರಿಕೆಯನ್ನು ತಾನು ಈಡೇರಿಸುವನೆಂಬ ಘೋಷಣೆಯನ್ನು ಪಡೆದ ತರುವಾಯ ನೋಂದಣಿ ಪ್ರಮಾಣಪತ್ರವನ್ನು ರದ್ದುಪಡಿಸತಕ್ಕದ್ದು:

ಪರಂತು, ಶಾಖಾ ಕಾರ್ಯಾಲಯಕ್ಕೆ ಸಂಬಂಧಪಟ್ಟಂತೆ ಪ್ರಮಾಣಪತ್ರವನ್ನು ಹಿಂದಿರುಗಿಸಿದರೆ ಶಾಖಾ ಕಾರ್ಯಾಲಯಕ್ಕೆ ಸಂಬಂಧಿಸಿದ ಹಿಂಬರಹವನ್ನು, ನೋಂದಣಿ ಪ್ರಮಾಣಪತ್ರದಿಂದ ತೆಗೆದುಹಾಕತಕ್ಕದ್ದು ಮತ್ತು ಹಾಗೆ ತೆಗೆದುಹಾಕಿರುವುದನ್ನು, ಮುಖ್ಯ ಕಾರ್ಯಾಲಯದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ನೋಂದಣಿ ಪ್ರಾಧಿಕಾರವು ನಿಯಮಿಸಬಹುದಾದಂತಹ ಇತರ ಪ್ರಾಧಿಕಾರಗಳಿಗೆ ಅಧಿಸೂಚಿಸತಕ್ಕದ್ದು.

**6. ಅಪೀಲು.–** (1) ಈ ಅಧಿನಿಯಮದ ಮೇರೆಗೆ ನೋಂದಣಿ ಪ್ರಮಾಣಪತ್ರವನ್ನು ಮಂಜೂರು ಮಾಡಲು ಅಥವಾ ನವೀಕರಿಸಲು ಅಥವಾ ನೋಂದಣಿಯನ್ನು ಅಮಾನತ್ತಿನಲ್ಲಿಟ್ಟಿರುವ ಅಥವಾ ರದ್ದುಪಡಿಸಿರುವ ನೋಂದಣಿ ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ 59) 89ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ರಚಿಸಿದ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು.

(2) ಉಪ-ಪ್ರಕರಣ (1)ರ ಮೇರೆಗಿನ ಅಪೀಲನ್ನು, ನೋಂದಣಿ ಪ್ರಾಧಿಕಾರದ ಆದೇಶಕ್ಕೆ ಸಂಬಂಧಿಸಿದಂತೆ ಮಾಡಿದ ಆಕ್ಷೇಪಣೆಗೆ ಕಾರಣಗಳನ್ನು ನಿರೂಪಿಸಿ ವಿವರಣಪತ್ರದ ರೂಪದಲ್ಲಿ ದ್ವಿಪ್ರತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ನಿಯಮಿಸಬಹುದಾದಂಥ ಫೀಜು ಅದರೊಂದಿಗೆ ಇರತಕ್ಕದ್ದು.

(3) ಉಪ-ಪ್ರಕರಣ (1) ಮತ್ತು (2)ರ ಉಪಬಂಧಗಳಿಗೆ ಬಾಧಕವಾಗದಂತೆ, ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಅಪೀಲಿಗೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಮೋಟಾರು ವಾಹನಗಳ ಅಧಿನಿಯಮ, 1988ರ (1988ರ 59) 89ನೇ ಪ್ರಕರಣದ (1)ನೇ ಹಾಗೂ (2)ನೇ ಉಪ-ಪ್ರಕರಣಗಳ ಉಪಬಂಧಗಳು, ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ, ಈ ಅಧಿನಿಯಮದ ಮೂಲಕ ಅವು ಅಧಿನಿಯಮಿತವಾಗಿದ್ದರೆ ಹೇಗೋ ಹಾಗೆ, ಅದರಲ್ಲಿ "ಪರವಾನಿಗೆ"ಗೆ ಮಾಡಿದ ಯಾವುದೇ ಉಲ್ಲೇಖವನ್ನು "ನೋಂದಣಿ"ಗೆ ಮಾಡಿದ ಉಲ್ಲೇಖವೆಂಬಂತೆ ಅರ್ಥೈಸತಕ್ಕದ್ದೆಂಬ ಮಾರ್ಪಾಟಿಗೊಳಪಟ್ಟು ಪ್ರತಿಯೊಂದು ಅಪೀಲಿಗೂ ಅನ್ವಯವಾಗತಕ್ಕದ್ದು.

**7. ವಾರ್ಷಿಕ ವಿವರಣಾಪಟ್ಟಿಯನ್ನು ಸಲ್ಲಿಸುವುದು.–** ಪ್ರತಿಯೊಂದು ರಾಜ್ಯಕ್ಕೆ ಅಥವಾ ಕೇಂದ್ರಾಡಳಿತ ಪ್ರದೇಶಕ್ಕೆ ಸಂಬಂಧಿಸಿದ ರಾಜ್ಯ ಸಾರಿಗೆ ಪ್ರಾಧಿಕಾರವು, ಸಂದರ್ಭಾನುಸಾರ ಆ ರಾಜ್ಯದಲ್ಲಿ ಅಥವಾ ಕೇಂದ್ರಾಡಳಿತ ಪ್ರದೇಶದಲ್ಲಿ ಸಾಮಾನ್ಯ ವಾಹಕರು ಸಾಗಿಸುವ ಸರಕುಗಳ ವಿವರಗಳನ್ನು 4ನೇ ಪ್ರಕರಣದ (7)ನೇ ಉಪ-ಪ್ರಕರಣದ (ಸಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದಂತೆ ನೋಂದಣಿ ಪ್ರಮಾಣಪತ್ರದ ಧಾರಕರಿಂದ ಸ್ವೀಕರಿಸಿದ ವಿವರಣಾ ಪಟ್ಟಿಗಳ ಆಧಾರದ ಮೇಲೆ ನೀಡುವ ಕ್ರೋಡೀಕೃತ ವಾರ್ಷಿಕ ವಿವರಣಾ ಪಟ್ಟಿಯನ್ನು ಪ್ರತಿ ವರ್ಷವು ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವ್ಯವಹರಿಸುವ ಮಂತ್ರಾಲಯಕ್ಕೆ ಅಥವಾ ಕೇಂದ್ರ ಸರ್ಕಾರದ ಇಲಾಖೆಗೆ ಸಲ್ಲಿಸತಕ್ಕದ್ದು.

**8. ಸರಕುಗಳ ರವಾನೆ ಚೀಟಿ.–** (1) ಪ್ರತಿಯೊಬ್ಬ ಸರಕು ರವಾನೆಗಾರನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಹಾಗೂ ರೀತಿಯಲ್ಲಿ ಸರಕು ರವಾನೆ ಚೀಟಿಯನ್ನು ಬರೆದುಕೊಡತಕ್ಕದ್ದು. ಅದು, ರವಾನೆ ಸರಕಿನ ಹಾಗೂ ಅಪಾಯಕಾರಕ ಅಥವಾ ವಿಪತ್ತುಕಾರಿ ಸ್ವರೂಪದ ಸರಕುಗಳ ಮೌಲ್ಯದ ಬಗ್ಗೆ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

(2) ಸರಕು ರವಾನೆಗಾರನು, ಸರಕು ರವಾನೆ ಚೀಟಿಯಲ್ಲಿ ತಾನು ಒದಗಿಸಿದ ವಿವರಗಳ ಸರಿತನದ ಬಗ್ಗೆ ಜವಾಬ್ದಾರನಾಗಿರತಕ್ಕದ್ದು.

(3) ಸರಕು ರವಾನೆಗಾರನು, ಸರಕುಗಳ ರವಾನೆ ಚೀಟಿಯಲ್ಲಿ ಹೇಳಿದ ವಿವರಗಳು ಸರಿಯಿಲ್ಲದಿರುವ ಅಥವಾ ಅಪೂರ್ಣವಾಗಿರುವ ಕಾರಣದಿಂದಾಗಿ ಸಾಮಾನ್ಯ ವಾಹಕನಿಗೆ ಉಂಟಾದ ಯಾವುದೇ ನಷ್ಟವನ್ನು ತುಂಬಿ ಕೊಡತಕ್ಕದ್ದು.

**9. ಸರಕು ರಸೀದಿ.–** (1) ಸಾಮಾನ್ಯ ವಾಹಕನು,–

(ಎ) ಸರಕು ರವಾನೆಗಾರನು ಸರಕುಗಳನ್ನು ತುಂಬಬೇಕಾದ ಸಂದರ್ಭದಲ್ಲಿ, ಹಾಗೆ ತುಂಬುವುದು ಪೂರ್ಣಗೊಂಡ ಮೇಲೆ; ಅಥವಾ

(ಬಿ) ಇತರ ಯಾವುದೇ ಸಂದರ್ಭದಲ್ಲಿ, ಸರಕುಗಳನ್ನು ತಾನು ಸ್ವೀಕರಿಸಿದ ಮೇಲೆ, ನಿಯಮಿಸಬಹುದಾದಂಥ ನಮೂನೆಯಲ್ಲಿ ಹಾಗೂ ರೀತಿಯಲ್ಲಿ ಸರಕು ರಸೀದಿಯನ್ನು ನೀಡತಕ್ಕದ್ದು.

(2) ಸರಕು ರಸೀದಿಯನ್ನು, ತ್ರಿಪ್ರತಿಯಲ್ಲಿ ನೀಡತಕ್ಕದ್ದು ಮತ್ತು ಮೂಲ ಪ್ರತಿಯನ್ನು ಸರಕು ರವಾನೆಗಾರನಿಗೆ ಕೊಡತಕ್ಕದ್ದು.

(3) ಸರಕು ರಸೀದಿಯು, ತೂಕಕ್ಕೆ ಅಥವಾ ಅಳತೆಗೆ ಮತ್ತು ಸರಕುಗಳ ಇತರ ವಿವರಗಳಿಗೆ ಹಾಗೂ ಅದರಲ್ಲಿ ಹೇಳಿರುವ ಪ್ಯಾಕೇಜುಗಳ ಸಂಖ್ಯೆಗೆ ಸಂಬಂಧಿಸಿ ಮೇಲ್ನೋಟಕ್ಕೆ ಸಾಕ್ಷ್ಯವಾಗತಕ್ಕದ್ದು.

(4) ಸರಕು ರಸೀದಿಯು, 10ನೇ ಪ್ರಕರಣದ ಅಥವಾ 11ನೇ ಪ್ರಕರಣದ ಮೇರೆಗಿನ ಹೊಣೆಗಾರಿಕೆಯ ಬಗ್ಗೆ ಸಾಮಾನ್ಯ ವಾಹಕನು ಬರೆದುಕೊಟ್ಟ ಮುಚ್ಚಳಿಕೆಯನ್ನು ಒಳಗೊಂಡಿರತಕ್ಕದ್ದು.

**10. ಸಾಮಾನ್ಯ ವಾಹಕನ ಹೊಣೆಗಾರಿಕೆ.–** (1) ಯಾವುದೇ ರವಾನೆ ಸರಕಿಗೆ ನಷ್ಟ ಅಥವಾ ಹಾನಿ ಆಗಿರುವುದಕ್ಕಾಗಿ ಸಾಮಾನ್ಯ ವಾಹಕನ ಹೊಣೆಗಾರಿಕೆಯು, 11ನೇ ಪ್ರಕರಣದ ಮೇರೆಗೆ ಸಾಮಾನ್ಯ ವಾಹಕನು ನಿಗದಿಪಡಿಸಿದ ಹೆಚ್ಚಿನ ಹೊಣೆಗಾರಿಕೆಯ ದರವನ್ನು ಸಂದಾಯ ಮಾಡಲು ಸರಕು ರವಾನೆಗಾರನು ಅಥವಾ ಆ ಬಗ್ಗೆ ಯಥೋಚಿತವಾಗಿ ಅಧಿಕೃತವಾದ ಯಾರೇ ವ್ಯಕ್ತಿಯು ಸ್ಪಷ್ಟವಾಗಿ ಮುಚ್ಚಳಿಕೆ ಬರೆದು ಕೊಟ್ಟಿದ್ದ ಹೊರತು, ಸರಕುಗಳ ಮೌಲ್ಯವನ್ನು ಸಾಗಣೆ ಬಾಡಿಗೆಯನ್ನು ಮತ್ತು ಸರಕುಗಳ ಸ್ವರೂಪವನ್ನು, ರವಾನೆ ಸರಕಿನ ದಸ್ತಾವೇಜುಗಳನ್ನು ಅಥವಾ ವಸ್ತುಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಿಸಬಹುದಾದಂಥ ಮೊಬಲಗಿಗೆ ಸೀಮಿತವಾಗಿರತಕ್ಕದ್ದು.

(2) ಸರಕು ರವಾನೆಗಾರನ ಮತ್ತು ಸಾಮಾನ್ಯ ವಾಹಕನ ಮತ್ತು ಅವರಿಬ್ಬರ ನಡುವೆ ಪರಸ್ಪರ ಒಪ್ಪಿಕೊಂಡಿರಬಹುದಾದಂಥ ಹಾಗೂ ಅಂಥ ಸರಕು ರವಾನೆ ಸಾಮಾನ್ಯ ವಾಹಕನ ವಶದಲ್ಲಿದ್ದ ಪರಿಣಾಮವಾಗಿ ಅಂಥ ರವಾನೆ ಸರಕಿಗೆ ಉಂಟಾದ ನಷ್ಟವು ಅಥವಾ ಹಾನಿಯು ಒಳಗೊಂಡಂತೆ ಸರಕು ರವಾನೆ ಚೀಟಿಯಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಿರಬಹುದಾದಂಥ ಅವಧಿಯವರೆಗೆ ಆದ ಯಾವುದೇ ವಿಳಂಬದ ಸಂದರ್ಭದಲ್ಲಿ ಸಾಮಾನ್ಯ ವಾಹಕನ ಹೊಣೆಗಾರಿಕೆಯು, ಆ ರವಾನೆ ಸರಕುಗಳು ಅಂಥ ವಾಹಕನ ವಶದಲ್ಲಿದ್ದಾಗ ನಷ್ಟ, ಹಾನಿ ಅಥವಾ ವಿಳಂಬ ಉಂಟಾಗಿದ್ದರೆ ಸಾಗಣೆ ಬಾಡಿಗೆ ವೆಚ್ಚಗಳ ಮೊಬಲಗಿಗೆ ಸೀಮಿತವಾಗಿರತಕ್ಕದ್ದು:

ಪರಂತು, ಸರಕು ರವಾನೆ ಚೀಟಿಯಲ್ಲಿ ಹಾಗೆ ಒಪ್ಪಿಕೊಂಡಿದ್ದ ಅವಧಿಗೂ ಮೀರಿದ ಅವಧಿಗೆ (1)ನೇ ಉಪ–ಪ್ರಕರಣಕ್ಕೆ ಅಥವಾ 11ನೇ ಪ್ರಕರಣಕ್ಕೆ ಅನುಸಾರವಾಗಿ ಪರಿಹಾರವನ್ನು ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಸಾಮಾನ್ಯ ವಾಹಕನು, ರವಾನೆ ಸರಕುಗಳಿಗೆ ಉಂಟಾದ ಅಂಥ ನಷ್ಟವು ಅಥವಾ ಹಾನಿಯು ಅಥವಾ ಅದನ್ನು ಸ್ವಾಧೀನಕ್ಕೆ ಒಪ್ಪಿಸುವಲ್ಲಿ ಉಂಟಾದ ವಿಳಂಬವು ತನ್ನ ಅಥವಾ ಸೇವಕರ ಅಥವಾ ಏಜೆಂಟರ ತಪ್ಪು ಅಥವಾ ನಿರ್ಲಕ್ಷ್ಯದಿಂದಾಗಿ ಆಗಿರಲಿಲ್ಲವೆಂದು ರುಜುವಾತು ಪಡಿಸಿದರೆ, ಹೊಣೆಗಾರನಾಗಿರತಕ್ಕದ್ದಲ್ಲ.

**11. ರವಾನೆ ಸರಕಿನ ಸಾಗಣೆಗಾಗಿ ಸಾಮಾನ್ಯ ವಾಹಕನು ಹೆಚ್ಚು ಅಪಾಯದ ಅನುಸಾರ ನಿಗದಿಪಡಿಸಬೇಕಾದ ವೆಚ್ಚದ ದರಗಳು.–** ಪ್ರತಿಯೊಬ್ಬ ಸಾಮಾನ್ಯ ವಾಹಕನು, ನಿರ್ದಿಷ್ಟ ರವಾನೆ ಸರಕನ್ನು ಸಾಗಿಸುವಾಗ ಅವನು ತೆಗೆದುಕೊಂಡ ಹೆಚ್ಚು ಅಪಾಯಕ್ಕಾಗಿ ಅವನು ನಿಗದಿಪಡಿಸಬಹುದಾದ ಶುಲ್ಕದ ದರದಲ್ಲಿ ಸಂದಾಯವನ್ನು ಅಗತ್ಯಪಡಿಸಬಹುದು ಮತ್ತು ತದನುಸಾರವಾಗಿ ಅವನ ಹೊಣೆಗಾರಿಕೆಯು, ಸರಕು ರವಾನೆಗಾರನೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದಾದಂಥ ನಿಬಂಧನೆಗಳಿಗನುಸಾರವಾಗಿ ಇರತಕ್ಕದ್ದು:

ಪರಂತು, ಅಂಥ ವಾಹಕನು ತನ್ನ ಶುಲ್ಕದ ಸಾಮಾನ್ಯ ದರಕ್ಕಿಂತ ಹೆಚ್ಚಿನ ದರದ ಸಂದಾಯವನ್ನು ಕ್ಲೇಮು ಮಾಡಬೇಕಾದರೆ ಆತನು, ಸಾಮಾನ್ಯ ವಾಹಕನ ವ್ಯವಹಾರವನ್ನು ಯಾವ ಸ್ಥಳದಲ್ಲಿ ಅಥವಾ ಆವರಣಗಳಲ್ಲಿ ನಡೆಸುತ್ತಿರುವನೋ ಆ ಸ್ಥಳದಲ್ಲಿ ಅಥವಾ ಆವರಣಗಳಲ್ಲಿ, ಶುಲ್ಕದ ಹೆಚ್ಚಿನ ದರಕ್ಕೆ ಸಂಬಂಧಿಸಿದ ಮುದ್ರಿತ ಅಥವಾ ಲಿಖಿತ ನೋಟೀಸನ್ನು ಇಂಗ್ಲೀಷ್‌ನಲ್ಲಿ ಮತ್ತು ರಾಜ್ಯದ ದೇಶೀಯ ಭಾಷೆಯಲ್ಲಿ ಪ್ರದರ್ಶಿಸಬೇಕು.

**12. ಸಾಮಾನ್ಯ ವಾಹಕನ ಹೊಣೆಗಾರಿಕೆಯನ್ನು ವಿಮೋಚನೆಗೊಳಿಸುವುದನ್ನು ನಿರ್ಬಂಧಿಸುವ ಷರತ್ತುಗಳು.–** (1) ಸರಕುಗಳ ರವಾನೆ ಚೀಟಿಗೆ ಅನುಸಾರವಾಗಿ ಯಾವುದೇ ರವಾನೆ ಸರಕುಗಳಿಗೆ ಆದಂತಹ ನಷ್ಟಕ್ಕೆ ಅಥವಾ ಹಾನಿಗಾಗಿ, ಅಂಥ ನಷ್ಟವು ಅಥವಾ ಹಾನಿಯು ಸಾಮಾನ್ಯ ವಾಹಕನ ಅಥವಾ ಅವನ ಯಾರೇ ಸೇವಕನ ಅಥವಾ ಏಜೆಂಟನ ಯಾವುದೇ ಕ್ರಿಮಿನಲ್ ಕೃತ್ಯದ ಕಾರಣದಿಂದಾಗಿ ಉಂಟಾಗಿದ್ದರೆ ಪ್ರತಿಯೊಬ್ಬ ಸಾಮಾನ್ಯ ವಾಹಕನು, ಸರಕು ರವಾನೆಗಾರನಿಗೆ ಹೊಣೆಗಾರನಾಗತಕ್ಕದ್ದು.

(2) ರವಾನೆ ಸರಕುಗಳಿಗೆ ಆದ ನಷ್ಟಕ್ಕೆ, ಹಾನಿಗೆ ಅಥವಾ ಅವುಗಳನ್ನು ತಲುಪಿಸದಿರುವುದಕ್ಕೆ ಸಾಮಾನ್ಯ ವಾಹಕನ ವಿರುದ್ಧ ಹೂಡಲಾದ ಯಾವುದೇ ದಾವೆಯಲ್ಲಿ, ಸರಕುಗಳಿಗೆ ಆದ ಅಂಥ ನಷ್ಟವು, ಹಾನಿಯು ಅಥವಾ ಅವುಗಳನ್ನು ತಲುಪಿಸದಿರುವುದು, ಸಾಮಾನ್ಯ ವಾಹಕನ ಅಥವಾ ಅವನ ಯಾರೇ ಸೇವಕನ ಅಥವಾ ಏಜೆಂಟರ ನಿರ್ಲಕ್ಷ್ಯದಿಂದ ಅಥವಾ ಅಪರಾಧಿಕ ಕೃತ್ಯದ ಕಾರಣದಿಂದಾಗಿದೆಯೆಂದು ರುಜುವಾತುಪಡಿಸುವುದು ವಾದಿಗೆ ಅವಶ್ಯಕವಾಗಿರತಕ್ಕದ್ದಲ್ಲ.

(3) ಸಕ್ಷಮ ಪ್ರಾಧಿಕಾರವು, ಯಾವುದೇ ರವಾನೆ ಸರಕುಗಳನ್ನು ತಪಾಸಣೆಗಾಗಿ ಅಥವಾ ಪರಿಶೀಲನೆಗಾಗಿ ತಡೆಹಿಡಿದಿದ್ದರೆ ಮತ್ತು ಅವುಗಳನ್ನು ಹಾಗೆ ತಪಾಸಣೆಗೆ ಅಥವಾ ಪರಿಶೀಲನೆಗೆ ಒಳಪಡಿಸಿದ ಮೇಲೆ ಕೆಲವು ನಿಷೇಧಿತ ಸರಕುಗಳು ಅಥವಾ ಯಾವ ಸರಕುಗಳಿಗೆ ಸೂಕ್ತ ತೆರಿಗೆಯನ್ನು ಪಾವತಿ ಮಾಡಿಲ್ಲವೊ ಅಥವಾ ಸಾಕಷ್ಟು ತೆರಿಗೆಯನ್ನು ಸಂದಾಯ ಮಾಡಿಲ್ಲವೋ

ಅಥವಾ ಸರಕುಗಳ ರವಾನೆ ಚೀಟಿಯಲ್ಲಿ ಯಾವ ಸರಕುಗಳನ್ನು ವಿವರಿಸಿಲ್ಲವೋ ಅಂಥ ನಿಷೇಧಿತ ಸರಕುಗಳು ಇರುವುದು ಕಂಡು ಬಂದರೆ ಅಥವಾ ಸಾಕಷ್ಟು ತೆರಿಗೆಯ ಸಂದಾಯ ಆಗದಿರುವಂಥ ಅಥವಾ ರವಾನೆ ಟಿಪ್ಪಣಿಯಲ್ಲಿ ವಿವರಣೆ ಇರದಿರುವಂಥ ಸರಕುಗಳು ಇರುವುದು ಕಂಡುಬಂದರೆ, ಅಂಥ ತಪಾಸಣೆಯ ಅಥವಾ ಪರಿಶೀಲನೆಯ ವೆಚ್ಚವನ್ನು ಸರಕು ರವಾನೆಗಾರನೇ ಭರಿಸತಕ್ಕದ್ದು ಮತ್ತು ಸಾಮಾನ್ಯ ವಾಹಕನು, ತಪಾಸಣೆಗಾಗಿ ಅಥವಾ ಪರಿಶೀಲನೆಗಾಗಿ ಅಂಥ ರವಾನೆ ಸರಕುಗಳನ್ನು ತಡೆಹಿಡಿದಿಟ್ಟಿರುವ ಕಾರಣದಿಂದ ಅವುಗಳಿಗೆ ಉಂಟಾದ ಯಾವುದೇ ನಷ್ಟಕ್ಕೆ, ಹಾನಿಗೆ ಅಥವಾ ಅವುಗಳು ಹಾಳಾಗದಿರುವುದಕ್ಕೆ ಹೊಣೆಗಾರನಾಗತಕ್ಕದ್ದಲ್ಲ:

ಪರಂತು, ಸರಕು ರವಾನೆಗಾರನಿಂದ ಸ್ವೀಕರಿಸಿದ ಸರಕುಗಳ ರವಾನೆ ಚೀಟಿಯಲ್ಲಿನ ಅಂಥ ಸರಕುಗಳ ವಿವರಣೆಯು ಸರಿಯಾಗಿಲ್ಲವೆಂದು ರುಜುವಾತುಪಡಿಸುವ ಭಾರ ಸಾಮಾನ್ಯ ವಾಹಕನ ಮೇಲಿರತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ, "ಸಕ್ಷಮ ಪ್ರಾಧಿಕಾರ" ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುವೇ ಕಾನೂನಿನ ಉಪಬಂಧಗಳ ಪಾಲನೆ ಆಗಿರುವುದನ್ನು ಸುನಿಶ್ಚಿತಪಡಿಸಿಕೊಳ್ಳುವುದಕ್ಕೆ ಆ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸರಕುಗಳ ತಪಾಸಣೆಗೆ ಅಥವಾ ಪರಿಶೀಲನೆಗಾಗಿ ಯಾವ ವ್ಯಕ್ತಿಗೆ ಅಧಿಕಾರ ನೀಡಲಾಗಿದೆಯೋ ಆ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರ.

**13. ಮಾನವ ಜೀವಕ್ಕೆ ಅಪಾಯಕಾರಕ ಅಥವಾ ಹಾನಿಕಾರಕ ಸ್ವರೂಪದ ಸರಕುಗಳ ಸಾಗಣೆಗಾಗಿ ಉಪಬಂಧ.**– (1) ಮಾನವ ಜೀವಕ್ಕೆ ಅಪಾಯಕಾರಿ ಅಥವಾ ಹಾನಿಕಾರಕ ಸ್ವರೂಪದ ಯಾವ ಸರಕುಗಳನ್ನು, ಸಾಮಾನ್ಯ ವಾಹಕನು ನಿಯಮಿಸಬಹುದಾದಂಥ ಕಾರ್ಯವಿಧಾನಕ್ಕನುಸಾರವಾಗಿ ಮತ್ತು ಅಂಥ ರಕ್ಷಣಾ ಕ್ರಮಗಳನ್ನನುಸರಿಸಿದ ಹೊರತು ಸಾಗಣೆ ಮಾಡತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ರಚಿಸಿದ ನಿಯಮಗಳ ಮೂಲಕ, ಮಾನವ ಜೀವಕ್ಕೆ ಅಪಾಯಕಾರಕ ಅಥವಾ ಹಾನಿಕಾರಕ ಸ್ವರೂಪದ ಸರಕುಗಳನ್ನು ಮತ್ತು ಸಾಗಣೆ ಮಾಡುವಾಗ ಮೋಟಾರು ವಾಹನದ ಮೇಲೆ ಅಥವಾ ಅಂಥ ಸರಕುಗಳ ಮೇಲೆ ಪ್ರದರ್ಶಿಸಬೇಕಾದ ಲೇಬಲನ್ನು ಅಥವಾ ಲೇಬಲ್‌ಗಳ ವರ್ಗವನ್ನು ನಿರ್ದಿಷ್ಟಪಡಿಸಬಹುದು.

(3) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ ಪ್ರತಿಯೊಬ್ಬ ಸಾಮಾನ್ಯ ವಾಹಕನು, ಮಾನವ ಜೀವಕ್ಕೆ ಅಪಾಯಕಾರಕ ಅಥವಾ ಹಾನಿಕಾರಕ ಸ್ವರೂಪದ ಸರಕುಗಳನ್ನು ಸಾಗಣೆ ಮಾಡಲು ಪ್ರಾರಂಭಿಸುವುದಕ್ಕೂ ಮೊದಲು ಪರಿಶೀಲಿಸತಕ್ಕದ್ದು ಮತ್ತು ಅಪಘಾತ ಸಂಭವಿಸಿದಲ್ಲಿ ಯಾರೇ ವ್ಯಕ್ತಿಯ ಮರಣ ಆದ ಅಥವಾ ಗಾಯ ಆದ ಅಥವಾ ಯಾವುದೇ ಸ್ವತ್ತಿಗೆ ಅಥವಾ ರವಾನೆ ಸರಕುಗಳಿಗೆ ನಷ್ಟ ಉಂಟಾಗುವಂತಹ ಸಂದರ್ಭದಲ್ಲಿ, ಅಂಥ ಸರಕುಗಳಿಗೆ ಸಂಬಂಧಿಸಿದಂತೆ ಪರಿಹಾರ ನೀಡಿಕೆ ಸಲುವಾಗಿ ರವಾನೆ ಸರಕುಗಳು ವಿಮಾ ಕರಾರಿನ ಮೇರೆಗೆ ಒಂದು ಅಥವಾ ಹೆಚ್ಚು ವಿಮಾ ಪಾಲಿಸಿಗಳಿಗೆ ಒಳಪಟ್ಟಿರುವುದನ್ನು ಪರಿಶೀಲಿಸತಕ್ಕದ್ದು ಮತ್ತು ಖಚಿತಪಡಿಸಿಕೊಳ್ಳತಕ್ಕದ್ದು.

**14. ಸರಕುಗಳ ಪೈಕಿ ಕೆಲವು ವರ್ಗದ ಸರಕುಗಳ ಸಾಗಣೆಯನ್ನು ನಿಷೇಧಿಸಲು ಕೇಂದ್ರ ಸರ್ಕಾರದ ಅಧಿಕಾರ.**– ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸರಕುಗಳನ್ನು ಅಥವಾ ಯಾವ ವರ್ಗದ ಸರಕುಗಳನ್ನು ಅಥವಾ ಯಾವ ವರ್ಗಗಳ ಸರಕುಗಳನ್ನು ಸಾಮಾನ್ಯ ವಾಹಕನು ಸಾಗಿಸಬಾರದೋ ಆ ಸರಕುಗಳನ್ನು ಅಥವಾ ಸರಕುಗಳ ವರ್ಗವನ್ನು ಅಥವಾ ಸರಕುಗಳ ವರ್ಗಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ದಿಷ್ಟಪಡಿಸಬಹುದು.

**15. ರವಾನೆ ಸ್ವೀಕರ್ತನು ತಪ್ಪಿದ ಸಂದರ್ಭದಲ್ಲಿ ಸಾಮಾನ್ಯ ವಾಹಕನ ಹಕ್ಕು.**– (1) ರವಾನೆ ಸ್ವೀಕರ್ತನು, ರವಾನೆಯಾದ ಸರಕುಗಳನ್ನು ಸಾಮಾನ್ಯ ವಾಹಕನು ನೀಡಿದ ನೋಟಿಸಿನ ದಿನಾಂಕದಿಂದ ಮೂವತ್ತು ದಿನಗಳ ಅವಧಿಯೊಳಗೆ ವಶಕ್ಕೆ ತೆಗೆದುಕೊಳ್ಳಲು ತಪ್ಪಿದರೆ ರವಾನೆಯಾದ ಅಂಥ ಸರಕನ್ನು ಕ್ಲೇಮು ಮಾಡದ ಸರಕುಗಳೆಂದು ಭಾವಿಸತಕ್ಕದ್ದು:

ಪರಂತು, ಹಾಳಾಗುವಂಥ ರವಾನೆ ಸರಕುಗಳ ಸಂದರ್ಭದಲ್ಲಿ, ಮೂವತ್ತು ದಿನಗಳ ಅವಧಿಯು ಅನ್ವಯವಾಗತಕ್ಕದ್ದಲ್ಲ ಮತ್ತು ರವಾನೆ ಸರಕುಗಳನ್ನು, ನೋಟೀಸನ್ನು ಜಾರಿ ಮಾಡಿದ ಇಪ್ಪತ್ನಾಲ್ಕು ಗಂಟೆಗಳ ಅವಧಿಯ ತರುವಾಯ ಅಥವಾ ಸಾಮಾನ್ಯ ವಾಹಕನು ಮತ್ತು ಸರಕು ರವಾನೆಗಾರನು ಮತ್ತು ಅವರ ನಡುವೆ ಪರಸ್ಪರ ಒಪ್ಪಿಕೊಳ್ಳಬಹುದಾದಂಥ ಯಾವುದೇ ಕಡಿಮೆ ಅವಧಿಯ ತರುವಾಯವೂ ಕ್ಲೇಮು ಮಾಡದ ಸರಕುಗಳೆಂದು ಭಾವಿಸತಕ್ಕದ್ದು.

(2) ಉಪ-ಪ್ರಕರಣ (1)ರ ಮೇರೆಗೆ ಕ್ಲೇಮು ಮಾಡದ ರವಾನೆ ಸರಕುಗಳ ಸಂದರ್ಭದಲ್ಲಿ, ಸಾಮಾನ್ಯ ವಾಹಕನು,–

(ಎ) ಅಂಥ ರವಾನೆ ಸರಕುಗಳು ಹಾಳಾಗುವ ಸ್ವರೂಪದವುಗಳಾಗಿದ್ದರೆ, ರವಾನೆ ಸರಕುಗಳನ್ನು ಮಾರಾಟ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು; ಅಥವಾ

(ಬಿ) ಅಂಥ ರವಾನೆ ಸರಕುಗಳು ಹಾಳಾಗುವ ಸ್ವರೂಪದವುಗಳಾಗಿಲ್ಲದಿದ್ದರೆ, ಸರಕು ಸ್ವೀಕರ್ತನಿಗೆ ಅಥವಾ ಸ್ವೀಕರ್ತನು ಲಭ್ಯವಿರದಿದ್ದರೆ ಸರಕು ರವಾನೆಗಾರನಿಗೆ ನೋಟಿಸನ್ನು, ಆ ನೋಟಿಸನ್ನು ಸ್ವೀಕರಿಸಿದ ದಿನಾಂಕದಿಂದ ಹದಿನೈದು ದಿನಗಳ ಅವಧಿಯೊಳಗೆ ಸರಕುಗಳನ್ನು ತೆಗೆದುಕೊಂಡು ಹೋಗುವಂತೆ ಅವನನ್ನು ಅಗತ್ಯಪಡಿಸಿ ನೋಟಿಸನ್ನು ಜಾರಿಮಾಡಿಸಬಹುದು ಮತ್ತು ನೋಟಿಸಿನಲ್ಲಿ ಹೇಳಿರುವುದನ್ನು ಪಾಲಿಸಲು ವಿಫಲನಾದ ಸಂದರ್ಭದಲ್ಲಿ ಸಾಮಾನ್ಯ ವಾಹಕನು ಸಂದರ್ಭಾನುಸಾರ ರವಾನೆ ಸ್ವೀಕರ್ತನಿಗೆ ಅಥವಾ ಸರಕು ರವಾನೆಗಾರನಿಗೆ ಯಾವುದೇ ಹೆಚ್ಚಿನ ನೋಟಿಸನ್ನು ಕೊಡದೆಯೇ ಅಂಥ ರವಾನೆ ಸರಕನ್ನು ಮಾರಾಟ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು.

(3) ಸಾಮಾನ್ಯ ವಾಹಕನು, (2)ನೇ ಉಪ-ಪ್ರಕರಣದ ಮೇರೆಗೆ ಸ್ವೀಕರಿಸಿದ ಮಾರಾಟ ಉತ್ಪತ್ತಿಗಳಿಂದ, ಮಾರಾಟಕ್ಕೆ ತಗುಲಿದ ವೆಚ್ಚಗಳು ಸೇರಿದಂತೆ ಬರಬೇಕಾಗಿರುವ ಬಾಡಿಗೆ ವೆಚ್ಚಗಳಿಗೆ, ದಾಸ್ತಾನು ಶುಲ್ಕಗಳಿಗೆ ಮತ್ತು ಇತರ ಶುಲ್ಕಗಳಿಗೆ ಸಮನಾದ ಮೊತ್ತವನ್ನು ಇಟ್ಟುಕೊಳ್ಳತಕ್ಕದ್ದು ಮತ್ತು ಅಂಥ ಮಾರಾಟದ ಉತ್ಪತ್ತಿಗಳಲ್ಲಿ ಏನಾದರು ಉಳಿದಿದ್ದರೆ ಅದನ್ನು ಸಂದರ್ಭಾನುಸಾರ ಸರಕು ಸ್ವೀಕರ್ತನಿಗೆ ಅಥವಾ ಸರಕು ರವಾನೆಗಾರನಿಗೆ ಹಿಂದಿರುಗಿಸತಕ್ಕದ್ದು.

(4) ಸಾಮಾನ್ಯ ವಾಹಕನ ಮತ್ತು ಸರಕು ರವಾನೆಗಾರನ ನಡುವೆ ಅನ್ಯಥಾ ಒಪ್ಪಂದವಾಗಿದ್ದ ಹೊರತು, ಸಾಮಾನ್ಯ ವಾಹಕನು, ಸರಕುಗಳನ್ನು ವಶಕ್ಕೆ ತೆಗೆದುಕೊಳ್ಳುವ ಕಾಲದಲ್ಲಿ ಸಾಮಾನ್ಯ ವಾಹಕನಿಗೆ ಸಂದಾಯವಾಗಬೇಕಾದ ಸಾಗಣೆ ಶುಲ್ಕ ಮತ್ತು ಇತರ ಶುಲ್ಕಗಳನ್ನು ಸಂದಾಯ ಮಾಡಲು ಸರಕು ಸ್ವೀಕರ್ತನು ತಪ್ಪಿದ ಸಂದರ್ಭದಲ್ಲಿ, ಅವನಿಂದ ಬರಬೇಕಾದುದನ್ನು ವಸೂಲು

ಮಾಡಲು ರವಾನೆ ಸರಕುಗಳನ್ನು ಭಾಗಶಃ ಅಥವಾ ಸಂಪೂರ್ಣವಾಗಿ ತನ್ನಲ್ಲೇ ಇಟ್ಟುಕೊಳ್ಳಲು ಅಥವಾ ವಿಲೆ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

**16. ದಾವೆಯನ್ನು ಹೂಡುವುದಕ್ಕಾಗಿ ನೋಟೀಸು.–** ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡುವುದಕ್ಕೆ ಮುಂಚೆ ಮತ್ತು ಸರಕು ರವಾನೆಗಾರನು ರವಾನೆ ಸರಕನ್ನು ಬುಕಿಂಗ್ ಮಾಡಿದ ದಿನಾಂಕದಿಂದ ಒಂದು ನೂರ ಎಂಭತ್ತು ದಿವಸಗಳೊಳಗೆ, ಸಾಮಾನ್ಯ ವಾಹಕನಿಗೆ ರವಾನೆ ಸರಕಿನ ನಷ್ಟಕ್ಕೆ ಅಥವಾ ಅದಕ್ಕೆ ಉಂಟಾದ ಹಾನಿಯ ಬಗ್ಗೆ ಲಿಖಿತದಲ್ಲಿ ನೋಟಿಸನ್ನು ಕೊಟ್ಟ ಹೊರತು ರವಾನೆ ಸರಕಿನ ಯಾವುದೇ ನಷ್ಟಕ್ಕಾಗಿ ಅಥವಾ ಹಾನಿಗಾಗಿ ಸಾಮಾನ್ಯ ವಾಹಕನ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**17. ಸಾಮಾನ್ಯ ವಾಹಕನ ಸಾಮಾನ್ಯ ಜವಾಬ್ದಾರಿ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುದನ್ನುಳಿದು, ಸಾಮಾನ್ಯ ವಾಹಕನು, ಸಾಗಣೆಯಲ್ಲಿರುವ ಅಥವಾ ಸಾಗಣೆ ಮಾಡುವುದಕ್ಕಾಗಿ ಅವನಿಗೆ ವಹಿಸಿದ ಯಾವುದೇ ರವಾನೆ ಸರಕನ್ನು ವಶಕ್ಕೆ ಒಪ್ಪಿಸದಿರುವ ಕಾಲದಲ್ಲಿ ಸರಕುಗಳಿಗೆ ಈ ಮುಂದಿನವುಗಳನ್ನು ಎಂದರೆ,–

(ಎ) ದೈವೀ ಘಟನೆ;

(ಬಿ) ಯುದ್ಧ ಅಥವಾ ಲೋಕ ಶತ್ರುಗಳ ಕಾರ್ಯ;

(ಸಿ) ಗಲಭೆಗಳು ಮತ್ತು ಪ್ರಜಾ ಕ್ಷೋಭೆ;

(ಡಿ) ಕಾನೂನು ಪ್ರಕ್ರಿಯೆ ಮೇರೆಗೆ ದಸ್ತಗಿರಿ, ತಡೆಹಿಡಿದಿಟ್ಟಿರುವುದು ಅಥವಾ ಜಪ್ತಿ;

(ಇ) ಕೇಂದ್ರ ಸರ್ಕಾರವು ಅಥವಾ ರಾಜ್ಯ ಸರ್ಕಾರವು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಅಧಿಕೃತಗೊಂಡು ಆ ಸರ್ಕಾರಕ್ಕೆ ಅಧೀನನಾಗಿರುವ ಅಧಿಕಾರಿಯು ಅಥವಾ ಪ್ರಾಧಿಕಾರಿಯು ಹೊರಡಿಸಿದ ಆದೇಶ ಅಥವಾ ವಿಧಿಸಿದ ನಿರ್ಬಂಧ ಅಥವಾ ನಿಷೇಧ,

– ಇವುಗಳನ್ನು ಹೊರತುಪಡಿಸಿ ಯಾವುದೇ ಕಾರಣದಿಂದ ಉಂಟಾದ ನಷ್ಟ, ನಾಶ, ಹಾನಿ ಅಥವಾ ಕ್ಷೀಣತೆಗೆ ಜವಾಬ್ದಾರನಾಗಿರತಕ್ಕದ್ದು:

ಪರಂತು, ಸಾಮಾನ್ಯ ವಾಹಕನು, ರವಾನೆ ಸರಕನ್ನು ಸಾಗಿಸುವಾಗ ಅವನು ಯುಕ್ತ ಶ್ರದ್ಧೆಯನ್ನು ಮತ್ತು ಕಾಳಜಿಯನ್ನು ವಹಿಸಿದ್ದೆ ಆದ ಪಕ್ಷದಲ್ಲಿ ಅಂಥ ನಷ್ಟವನ್ನು, ನಾಶವನ್ನು, ಹಾನಿಯನ್ನು ಅಥವಾ ಕ್ಷೀಣತೆಯನ್ನು ಅಥವಾ ಒಪ್ಪಿಸದಿರುವುದನ್ನು ತಪ್ಪಿಸಬಹುದಾಗಿದ್ದಂಥ ಸಂದರ್ಭದಲ್ಲಿ ರವಾನೆ ಸರಕಿನ ನಷ್ಟಕ್ಕೆ, ನಾಶಕ್ಕೆ, ಹಾನಿಗೆ, ಕ್ಷೀಣತೆಗೆ ಅಥವಾ ಒಪ್ಪಿಸದಿರುವಿಕೆಗಾಗಿ ಅವನಿಗಿರುವ ಜವಬ್ದಾರಿಯಿಂದ ಅವನನ್ನು ಮುಕ್ತಗೊಳಿಸತಕ್ಕದ್ದಲ್ಲ.

**18. ನೋಂದಣಿಯಾಗಿರದ, ಅಪಾಯಕಾರಕ ಅಥವಾ ಅಪಾಯಕಾರಿ ಸ್ವರೂಪದ ಸರಕುಗಳನ್ನು ಅಥವಾ ನಿಷೇಧಿತ ಸರಕುಗಳನ್ನು ಸಾಗಿಸುವ ಸಂಬಂಧದಲ್ಲಿ ಉಲ್ಲಂಘನೆಗಾಗಿ ದಂಡ.–** (1) 3ನೇ ಪ್ರಕರಣದ, 13ನೇ ಪ್ರಕರಣದ ಉಪಬಂಧಗಳನ್ನು ಅಥವಾ 14ನೇ ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯನ್ನು ಉಲ್ಲಂಘಿಸುವ ಯಾರೇ ಆಗಲಿ, ಮೊದಲನೇ ಅಪರಾಧಕ್ಕಾಗಿ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಎರಡನೇ ಅಥವಾ ತರುವಾಯದ ಅಪರಾಧಕ್ಕಾಗಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಶಿಕ್ಷೆಗೆ ಗುರಿಯಾಗತಕ್ಕದ್ದು.

(2) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಅಪರಾಧವನ್ನು ಮಾಡಿದ ಕಾಲದಲ್ಲಿ, ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಸಹ, ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ಶಿಕ್ಷೆಗೆ ಗುರಿಯಾಗತಕ್ಕದ್ದು:

ಪರಂತು, ಆ ಅಪರಾಧವು ತನ್ನ ಅರಿವಿಗೆ ಬಾರದೇ ನಡೆದಿದೆಯೆಂದೂ ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಯಲು ತಾನು ಎಲ್ಲಾ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(3) ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ಯಾವುದೇ ನಿರ್ಲಕ್ಷ್ಯತೆಯಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದಲ್ಲಿ, ಅಂಥ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ, ಅಥವಾ ಇತರ ಅಧಿಕಾರಿಯ ವಿರುದ್ಧ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದು ಮತ್ತು ತದನುಸಾರವಾಗಿ ಅವನು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ,– ಈ ಪ್ರಕರಣದ ಉದ್ದೇಶಕ್ಕಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ ಫರ್ಮಿನ ಒಬ್ಬ ಪಾಲುದಾರ.

**19. ಅಪರಾಧಗಳ ಬಗ್ಗೆ ರಾಜಿ ಮಾಡಿಕೊಳ್ಳುವುದು.–** (1) ಪ್ರಕರಣ 18ರ ಮೇರೆಗೆ ಮಾಡಿದ ಯಾವುದೇ ಅಪರಾಧದ ಬಗ್ಗೆ, ಪ್ರಾಸಿಕ್ಯೂಷನ್ ಹೂಡುವ ಮುಂಚೆಯಾಗಲಿ ಅಥವಾ ತರುವಾಯವಾಗಲಿ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಮತ್ತು ಅಂಥ ಮೊಗಲಗಿಗಾಗಿ ರಾಜಿ ಮಾಡಿಕೊಳ್ಳಬಹುದು.

(2) ಉಪ–ಪ್ರಕರಣ (1)ರ ಮೇರೆಗೆ ಅಪರಾಧದ ಬಗ್ಗೆ ರಾಜಿಮಾಡಿಕೊಂಡರೆ ಅಪರಾಧಿಯು, ಅಂಥ ಅಪರಾಧದಿಂದ ವಿಮುಕ್ತನಾಗತಕ್ಕದ್ದು ಮತ್ತು ಅಂತಹ ಅಪರಾಧದ ಸಂಬಂಧದಲ್ಲಿ ಅವನ ವಿರುದ್ಧ ಮುಂದೆ ಯಾವುದೇ ಕಾನೂನು ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**20. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:

(ಎ) 4ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಮುಖ್ಯ ಕಾರ್ಯಾಲಯದ ಅಥವಾ ಶಾಖಾ ಕಾರ್ಯಾಲಯದ ನೋಂದಣಿ ಪ್ರಮಾಣಪತ್ರದ ಮಂಜೂರಾತಿಗಾಗಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸಲ್ಲಿಸಬೇಕೊ ಆ ನಮೂನೆ ಮತ್ತು ರೀತಿ ಮತ್ತು ಅದಕ್ಕಾಗಿ ಸಲ್ಲಿಸಬೇಕಾದ ಫೀಜು;

(ಬಿ) 4ನೇ ಪ್ರಕರಣದ (4)ನೇ ಉಪ-ಪ್ರಕರಣದ (ಡಿ) ಖಂಡದ ಮೇರೆಗೆ ಅರ್ಜಿದಾರನು ಈಡೇರಿಸಬೇಕಾದ ಅರ್ಹತೆ ಬಗೆಗಿನ ಇತರ ಷರತ್ತುಗಳು;

(ಸಿ) 4ನೇ ಪ್ರಕರಣದ (5)ನೇ ಉಪ–ಪ್ರಕರಣದ ಮೇರೆಗೆ ಯಾವ ನಮೂನೆಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ನೋಂದಣಿ ಪ್ರಮಾಣಪತ್ರವನ್ನು ಅಥವಾ ಅದರ ನವೀಕರಣವನ್ನು ಮಂಜೂರು ಮಾಡಬೇಕೊ ಆ ನಮೂನೆ ಮತ್ತು ಷರತ್ತುಗಳು;

(ಡಿ) 4ನೇ ಪ್ರಕರಣದ (7)ನೇ ಉಪ–ಪ್ರಕರಣದ (ಎ) ಖಂಡದ ಮೇರೆಗೆ ಯಾವ ನಮೂನೆ ಮತ್ತು ರೀತಿಯಲ್ಲಿ ರಿಜಿಸ್ಟರನ್ನು ನಿರ್ವಹಿಸಬೇಕೊ ಆ ನಮೂನೆ ಮತ್ತು ರೀತಿ;

(ಇ) 4ನೇ ಪ್ರಕರಣದ (7)ನೇ ಉಪ–ಪ್ರಕರಣದ (ಸಿ)ಖಂಡದ ಮೇರೆಗೆ ಯಾವ ಮಾಹಿತಿಯನ್ನು ಮತ್ತು ವಿವರ ಪಟ್ಟಿಕೆಯನ್ನು ನೋಂದಣಿ ಪ್ರಾಧಿಕಾರಕ್ಕೆ ಮತ್ತು ಸಾರಿಗೆ ಸಂಶೋಧನಾ ವಿಭಾಗಕ್ಕೆ ಸಲ್ಲಿಸಬೇಕೊ ಆ ಮಾಹಿತಿ ಮತ್ತು ವಿವರ ಪಟ್ಟಿಕೆ;

(ಎಫ್) 6ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ಅಪೀಲಿನ ವಿವರಣ ಪತ್ರವನ್ನು ಸಲ್ಲಿಸುವುದಕ್ಕಾಗಿ ಫೀಜು;

(ಜಿ) 8ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸರಕು ರವಾನೆಗಾರನು ಯಾವ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸರಕು ರವಾನೆ ಚೀಟಿಯನ್ನು ಬರೆದುಕೊಡಬೇಕೊ ಆ ನಮೂನೆ ಮತ್ತು ರೀತಿ;

(ಹೆಚ್) 9ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸಾಮಾನ್ಯ ವಾಹಕನು ಸರಕುಗಳ ಸ್ವೀಕೃತಿಯನ್ನು ಯಾವ ನಮೂನೆ ಮತ್ತು ರೀತಿಯಲ್ಲಿ ನೀಡಬೇಕೊ ಆ ನಮೂನೆ ಮತ್ತು ರೀತಿ;

(ಐ) ಯಾವುದೇ ರವಾನೆ ಸರಕಿನ ನಷ್ಟಕ್ಕೆ ಅಥವಾ ಹಾನಿಗೆ 10ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಸಾಮಾನ್ಯ ವಾಹಕನ ಹೊಣೆಗಾರಿಕೆ;

(ಜೆ) ಅಪಾಯಕಾರಕ ಅಥವಾ ಹಾನಿಕಾರಕ ಸ್ವರೂಪದ ಸರಕುಗಳ ಸಾಗಣೆಗಾಗಿ 13ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಪಾಲಿಸಬೇಕಾದ ಕಾರ್ಯವಿಧಾನ ಮತ್ತು ರಕ್ಷಣಾ ಕ್ರಮಗಳು;

(ಕೆ) ಮಾನವ ಜೀವಕ್ಕೆ ಅಪಾಯಕಾರಕವಾದ ಅಥವಾ ಹಾನಿಕಾರಕವಾದ ಸ್ವರೂಪದ ಸರಕುಗಳನ್ನು ಮತ್ತು ಅವುಗಳನ್ನು ಸಾಗಿಸುವಾಗ ಮೋಟಾರು ವಾಹನದಲ್ಲಿ ಅಥವಾ ಅದರ ಮೇಲೆ ಅಂಥ ಸರಕುಗಳ ಮೇಲೆ ಇರಬೇಕಾದ ಅಥವಾ ಪ್ರದರ್ಶಿಸಬೇಕಾದ ಲೇಬಲನ್ನು ಅಥವಾ ಲೇಬಲ್‌ಗಳ ವರ್ಗವನ್ನು 13ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸುವುದು;

(ಎಲ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ;

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು 14ನೇ ಪ್ರಕರಣದ ಮೇರೆಗೆ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ಅಥವಾ ಹೊರಡಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಅಥವಾ ಅಧಿಸೂಚನೆಯನ್ನು ಹೊರಡಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ಆ ಅಧಿಸೂಚನೆಯು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**21. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಾಗ ಯಾವುದೇ ತೊಂದರೆ ಉದ್ಭವಿಸಿದಲ್ಲಿ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ತೊಂದರೆಯನ್ನು ನಿವಾರಿಸುವುದಕ್ಕೆ ಅಗತ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬರುವಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂಥ ಉಪಬಂಧಗಳನ್ನು ಕಲ್ಪಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ನಂತರ, ಈ ಪ್ರಕರಣದ ಮೇರೆಗೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ನಂತರ, ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

**22. ನಿರಸನ ಮತ್ತು ಉಳಿಸುವಿಕೆ.**- (1) ವಾಹಕಗಳ ಅಧಿನಿಯಮ, 1865ನ್ನು (1865ರ 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ವಾಹಕಗಳ ಅಧಿನಿಯಮ, 1865ರ (1865ರ 3) ನಿರಸಿತವಾಗಿದ್ದರೂ, ಸದರಿ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಕ್ರಮವನ್ನು, ಅಂಥ ಕಾರ್ಯವು ಅಥವಾ ಕ್ರಮವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟುಮಟ್ಟಿಗೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿದೆ ಎಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯದಿಂದ ಅಥವಾ ಕೈಗೊಂಡ ಯಾವುದೇ ಕ್ರಮದಿಂದ ಅವು ರದ್ದಾಗುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

(3) ಈ ಪ್ರಕರಣದಲ್ಲಿ ನಿರ್ದಿಷ್ಟ ವಿಷಯಗಳನ್ನು ಉಲ್ಲೇಖಿಸಿರುವುದು, ನಿರಸನಗಳ ಪರಿಣಾಮಕ್ಕೆ ಸಂಬಂಧಿಸಿದಂತೆ ಸಾಮಾನ್ಯ ಖಂಡಗಳ ಅಧಿನಿಯಮ, 1897ರ (1897ರ 10) 6ನೇ ಪ್ರಕರಣದ ಸಾಮಾನ್ಯ ಅನ್ವಯಕ್ಕೆ ಪ್ರತಿಕೂಲ ಪ್ರಭಾವವನ್ನುಂಟು ಮಾಡುತ್ತದೆ ಅಥವಾ ಬಾಧಕ ಉಂಟು ಮಾಡುತ್ತದೆ ಎಂದು ನಿರ್ಣಯಿಸತಕ್ಕದ್ದಲ್ಲ.

* * * * *